# ಅಕ್ಕಮಹಾದೇವಿಯವರ "ಎ" "ಏ" ಅಕ್ಷರದ ವಚನದ ಅರ್ಥ

**1).ಎನ್ನನಾನರಿಯದ ಮುನ್ನ ನೀನೆಲ್ಲಿರ್ದೆ ಹೇಳಯ್ಯ? ಚಿನ್ನದೊಳಗಣ ಬಣ್ಣದಂತೆ ಎನ್ನೊಳಗಿರ್ದೆಯಯ್ಯ ಎನ್ನೊಳಗೆ ಇಂತಿರ್ದು ಮೈದೋರದ ಭೇದವ ನಿಮ್ಮಲ್ಲಿ ಕಂಡೆ ಕಾಣಾ ಚೆನ್ನಮಲ್ಲಿಕಾರ್ಜುನಾ.**

ಪದಗಳ ಅರ್ಥ

ಎನ್ನ -ದೇಹದೊಳಗಿರುವ ಅತ್ಮ
ನಾನು- ದೇಹವೇ ನಾನು ಎಂದು ತಿಳಿದಿರುವ ಅಜ್ಞಾನಿ.
ನೀನು-ದೇವರು, ಇಲ್ಲಿ ಬ್ರಹ್ಮ ಸೃಷ್ಟಿಕ್ರಿಯೆನಡೆಸಿ ಸಕಲ ಜೀವಜಾಲಕ್ಕೆ ಕಾರಣನೂಆದ ಅವಿನಾಶಿ ಪರಬ್ರಹ್ಮ.
ಮೈದೋರದ- ವ್ಯಕ್ತವಾಗದ,
ಭೇದ-ರಹಸ್ಯ,ಮರ್ಮ,ಸ್ವಭಾವ, ಚೆನ್ನಮಲ್ಲಿಕಾರ್ಜುನ-ನಿರಾಕಾರನಾದ ಪರಬ್ರಹ್ಮ.

ವಚನದ ಅರ್ಥ

ಈ ವಚನವು ಆತ್ಮಸಾಕ್ಷಾತ್ಕಾರದ ದರ್ಶನ ಮಾಡಿಸುತ್ತದೆ. ದೇವರ ಬಗೆಗೆ ತಿಳಿಯಲು, ಕಾಣಲು ಸಾಧನೆ ಮಾಡುತ್ತ ಹಂಬಲಿಸುವ ವ್ಯಕ್ತಿಗೆ ದೇವರ ಬಗೆಗೆ ಆರಂಭದಲ್ಲಿ ಸರಿಯಾದ ತಿಳಿವಳಿಕೆ ಇರುವುದಿಲ್ಲ. ನಮ್ಮನ್ನು ಹಡೆದ ತಂದೆತಾಯಿ ಬಂಧು ಬಳಗ ಪರಿಸರದವರೂ ಕೂಡ ಪ್ರಾಥಮಿಕ ಅವಸ್ಥೆಯ ಭಕ್ತಿಯಲ್ಲಿಯೇ ಇರುತ್ತಾರೆ. ದೇವರು ಇಲ್ಲಿ ಇದ್ದಾನೆ. ಇಲ್ಲಿ ಇಲ್ಲ ಎಂಬ ಪುರಾಣಕಥೆಗಳನ್ನೇ ನಂಬಿರುತ್ತಾರೆ. ಸ್ವತಃ ದೇವರನ್ನು ಕಾಣಲು ಅನುಭಾವ ಜೀವನಕ್ಕೆ ಬಂದಾಗ ನಮಗೆ ಮಾರ್ಗದರ್ಶಕ ಗುರುಗಳು ಯಾರೂ ಇರುವುದಿಲ್ಲ. ಸ್ವತ: ನಾವೇ ಏಕಾಂಗಿಯಾಗಿ ಸಾಧನೆ ಮಾಡುತ್ತ.ಮಹಾತ್ಮರ ಕಥೆಗಳನ್ನೂ ವಚನಗಳನ್ನೂ ಅಭ್ಯಾಸ ಮಾಡುತ್ತ ಚಿತ್ಯ ದರ್ಶನ ಪಡೆಯಲು ಪ್ರಯತ್ನಿಸುತ್ತೇವೆ. ಕಾಡಾರಣ್ಯದಲ್ಲಿ ಏಕಾಂತದಲ್ಲಿ, ಅಕ್ಕಮಹಾದೇವಿಯವರು ಶ್ರೀಶೈಲದಲ್ಲಿ
ಹಲವು ವರ್ಷಗಳು ತಪಸ್ಸು ನಡೆಸಿದಾಗ ದೇವರು ಏನು ಎತ್ತ?ಈ ಸಂಗತಿಗಳು ನಿಸರ್ಗ, ಆಕಾಶ, ಸಮುದ್ರ, ಕಾಡು, ಬೆಟ್ಟ ಗುಡ್ಡ, ಜೀವ, ಜಾಲದ ದರ್ಶನದಿಂದ ಮಸಕುಮಸಕಾಗಿ ಸತ್ಯದಬೆಳಕಿನ ಕಿರಣಗಳು ಕಾಣಿಸಿಕೊಳ್ಳುತ್ತ. ಈ ದಾರಿಯಲ್ಲಿ ಮತ್ತೆ ಮುಂದುವರಿದ ಅಕ್ಕನವರು ಸತ್ಯದರ್ಶನ. ಈ ಅನುಭಾವದ ಅನುಭಾವ ತಮ್ಮದೇ ಆದ ತಾಜಾ ಅನುಭಾವವನ್ನು ಅಕ್ಕಮಹಾದೇವಿಯ ವರು ಒಂದು ಉಪಮೆಯ ಮೂಲಕ ದೇವರ ವ್ಯಾಖ್ಯೆಯನ್ನು ನಮ್ಮ ಮುಂದಿಟ್ಟಿದ್ದಾರೆ.

ಎನ್ನ ನಾನರಿಯದ ಮುನ್ನ ನೀನೆಲ್ಲಿರ್ದೆ ಹೇಳಯ್ಯ? ನನ್ನನ್ನು ನಾನು ತಿಳಿಯುವ ಮುಂಚೆ ನೀನು ಎಲ್ಲಿ ಇದ್ದೆ. ನಾನು ದೇಹ,ನಾನು ಹೆಣ್ಣು, ನಾನು ಓಂಕಾರ-ಲಿಂಗಮ್ಮರ | ಮಗಳು ಎಂದು ನನ್ನನ್ನು ನಾನು ಭಾವಿಸಿಕೊಂಡಿದ್ದ ಕಾಲಕ್ಕೆ ಓ!ಪರಮಾತ್ಮನೇ ನೀನು ಎಲ್ಲಿದ್ದೆ? ಚಿನ್ನದೊಳಗಣ ಬಣ್ಣದಂತೆ

ಎನ್ನೊಳಗಿರ್ದೆಯಯ್ಯ ಇದೊಂದು ಸುಂದರ ಉಪಮೆ.ಜೀವತ್ಮ ಪರಮಾತ್ಮರ ಸಂಬಂಧವನ್ನು ತುಂಬ ಸಮರ್ಥವಾಗಿ ಹೇಳುತ್ತದೆ.. ಚೆನ್ನ-ಬಣ್ಣಇವೆರಡೂ

ಅವಿನಾಭಾವ ಸಂಬಂಧಉಳ್ಳದ್ದು. ಚಿನ್ನವನ್ನು ಬಿಟ್ಟು ಬಣ್ಣವಿಲ್ಲ. ಬಣ್ಣ ಬಿಟ್ಟು ಚಿನ್ನವೂ ಇಲ್ಲ ಬಂಗಾರದ ಅಣು ಅಣು ಕಣ ಕಣವನ್ನು ಛಿದ್ರಿಸುತ್ತಾ ಹೋದರೂ ಬಂಗಾರದ ಧೂಳು ಬಣ್ಣದಿಂದ ಮಿರುಗುತ್ತಿರುತ್ತದೆ. ಚಿನ್ನ-ಬಣ್ಣಬೇರಾಗದೆ ಅವಿನಾಭಾವದಲ್ಲಿ ಒಂದಾಗಿ ಇವೆಯೊ ಹಾಗೆ ಜೀವಾತ್ಮ ಎಂದು ದೇಹವು ಬೆಲೆ ಪಡೆದುಕೊಳ್ಳಬೇಕಾದರೆ ಆ ದೇಹದಲ್ಲಿ ಚೈತ ಸ್ವರೂಪಿ ಪರಮಾತ್ಮ ಇರಲೇಬೇಕು. ಅವನು ಇಲ್ಲ ಆಗ ದೇಹವು ಕ್ರಿಯೆಹೋಗಿ ಶವ ಬಾಗಿಬಿಡುತ್ತದೆ. ನಾವೆಲ್ಲ ನಾಶವಾಗುವ ಈ ದೇಹವನ್ನೆ ನಾನು ಎಂದು ಭಾವಿಸಿದ್ದೇವೆ. ದೇಹವು ಚೈತನ್ಯ, ಪ್ರಾಣಸಮೇತವಾಗಿ ಇದೆ. ಆ ಆತ್ಮಸ್ವರೂಪಿಯೆ ಪರಮಾತ್ಮನ ಚಿದಂಶೀಭೂತ. ನನ್ನೊಳಗೆ ಪ್ರಾಣಸ್ವರೂಪಿ ಆತ್ಮವಾಗಿ, ಬುದ್ಧಿಯಾಗಿ, ಅರಿವಾಗಿ ನೀನು ಇರುವೆ.ಎನ್ನೊಳಗೆ ಇಂತಿರ್ದು ಮೈದೋರದ ಭೇದವ; ಈರೀತಿಯಾಗಿ ನೀನು ನನ್ನೊಳಗೆ ಇದ್ದರೂನೀನುಮಾತ್ರ ಆಕಾರ ಪಡೆಯದೆ ಅರಿವಿಗೆ ಬರದಂತೆ ಸಹಜವಾಗಿನಿರ್ಲಿಪ್ತವಾಗಿ ನನ್ನೊಳಗೆ ಇರುವೆ ಆತ್ಮನ ಈಸಾಕ್ಷಿತ್ವ ಭಾವ,ಲಕ್ಷಣ ನಿನಗೆವಿಶಿಷ್ಟವಾದುದು. ಇದನ್ನು ನಿಮ್ಮಲ್ಲಿ ಕಂಡೆ ಕಾಣಾ ಚೆನ್ನಮ ಲ್ಲಿಕಾರ್ಜುನ. ದೇವರ ಈ ವಿಶೇಷ ವೈಲಕ್ಷಣ್ಯವನ್ನು ದೇವರಲ್ಲಿ ಮಾತ್ರ ಕಾಣಬಹುದು. ಇತರೆಡೆ ಇದು ಇಲ್ಲ ಎಂಬುದನ್ನು ಅಕ್ಕಮಹಾದೇವಿಯವರು ವಿವರಿಸಿದ್ದಾರೆ. ನಾವೆಲ್ಲ ದೇವರನ್ನು ಹೊರಗೆ ಹುಡುಕಿ ಬಳಲುತ್ತೇವೆ. ಆದರೆ ಅನುಭಾವಿಯಾದ ಸಾಧಕನು ಅಂತರ್ಮುಖಿಯಾಗಿ ಒಳಗಣ್ಣಿನಿಂದ ನೋಡತೊಡಗುತ್ತಾನೆ. ಪ್ರಜ್ಞಾ ಮತ್ತು ಚೈತನ್ಯ ಸ್ವರೂಪಿ ಆತ್ಮ ಯಾವ ಪ್ರೇರಣೆಯಿಂದ ನಿತ್ಯ ಕ್ರಿಯಾಜ್ಞಾನದಲ್ಲಿ ನಿರತವಾಗಿದೆ? ಈ ಎಲ್ಲ ವೈಲಕ್ಷಣ್ಯಗಳನ್ನು ಸಾಧಕಜೀವನು ಕಂಡುಕೊಳ್ಳಬೇಕು. ಯಾವುದನ್ನು ನಾನು ಎಂದು ತಿಳಿದಿದ್ದೆವೊ ಅಂತಹ ಈ ದೇಹವು ವಿಕಾರ ಪಥದಲ್ಲಿ ಗತಿಶೀಲವಾಗಿದೆ. ಮಗುವಾಗಿತ್ತು, ಬಾಲ್ಯ ಬಂತು.ತಾರುಣ್ಯ ಬಂತು. ಸಾಧನಾವಸ್ಥೆ ಬಂತು. ಸಾಧಕಿ, ಅನುಭಾವಿಯಾದೆ. ಮುಂದೆ ವೃದ್ಧಾಪ್ಯ, ರೋಗಸಾವು,ನೋವುಗಳು ಈ ದೇಹಕ್ಕಿದೆ. ಈ ದೇಹದೊಳಗೆ ಇದಕ್ಕೆಲ್ಲ ಆಧಾರವಾಗಿ ಯಾವು ದಿದೆ ಅದುಮಾತ್ರ ಇದ್ದ ಹಾಗೆಯೆ ಇದೆ. ಎಷ್ಟು ವರ್ಷ ಈ ದೇಹಕ್ಕೆ ಗತಿಸಿದರೂ ಅದು ಮಾತ್ರ ಕಾಲ, ದೇಶ, ಭಾಷೆಯನ್ನು ಮೀರಿ ತಾನಾಗಿಯೆ ಇರುತ್ತದೆ. ಇಂತಹ ಅವಿನಾಶಿ ಚಿರಂತನ ಶಕ್ತಿ, ಜ್ಞಾನ ಸ್ವರೂಪಿಯಾದುದು ನನ್ನೊಳಗೆ ಇದೆ. ಆ ಪರಮಾತ್ಮ ಶಕ್ತಿಯೇ ಒಳಗೂ ಹೊರಗೂ ಸಕಲ ಜೀವ ಜಾಲವೆಲ್ಲದರಲ್ಲೂ ತಾನೆತಾನಾಗಿ ಇದೆ. ಅದು ಇಂದಿಗೂ ಎಂದೆಂದಿಗೂ ಹಿಂದೆಯೂ, ಮುಂದೂ ತಾನೇತಾನಾಗಿಇರುತ್ತದೆ.ಅದನ್ನು ಕಾಲ ಬಾಧಿಸಲಾರದು.ಭಾಷೆ ವರ್ಣಿಸಲಾರದು. ಇಂತಹ ಅನಂತನ ಮಹತ್ತಾದ ನೀನು ನೀನೇನೀನಾಗಿರುವೆ ಎಂಬುದನ್ನು ನಿಮ್ಮಲ್ಲಿ ನಾನು ತಿಳಿದುಕೊಂಡೆನು. ಚೆನ್ನ ಮಲ್ಲಿಕಾರ್ಜುನ ಪರಬ್ರಹ್ಮನೇ ಎಂದು ಅಕ್ಕಮಹಾದೇವಿಯವರು ಇಲ್ಲಿ ವಿವರಿಸಿದ್ದಾರೆ.ದೇವರನ್ನು ಮೊದಲು ಚೆನ್ನಮಲ್ಲಿಕಾರ್ಜುನ ತ್ರಿಶೂಲಧಾರಿ, ಗೌರೀಪತಿ, ಗಂಗಾಧರ, ಕೈಲಾಸವಾಸಿ ಎಂದು ತಿಳಿದಿದ್ದರು. ಆದರೆ ಇದು ಪುರಾಣದ ಕಥೆ ಅಷ್ಟೆ. ದೇವರು ಚೆನ್ನಮಲ್ಲಿಕಾರ್ಜುನ ಎಂದರೆ ಪರಬ್ರಹ್ಮ ಅವನಿಗೆ ಜನನ, ಮರಣ, ಕಾಲ, ದೇಶಗಳಿಲ್ಲ. ವಿಕಾರಗಳೂ ಇಲ್ಲ ಎಂಬುದನ್ನು ಅರಿತುಕೊಂಡರು.

2).ಎನ್ನ ಮಾಯದ ಮದವ ಮುರಿಯಯ್ಯ.
ಎನ್ನ ಕಾಯದ ಕತ್ತಲೆಯ ಕಳೆಯಯ್ಯ.
ಎನ್ನ ಜೀವದ ಜಂಜಡವ ಮಾಣಿಸ ಅಯ್ಯ. ಚೆನ್ನಮಲ್ಲಿಕಾರ್ಜುನಯ್ಯ. ಎನ್ನ ಸುತ್ತಿದ
ಮಾಯಾ ಪ್ರಪಂಚವ ಬಿಡಿಸಾ ನಿಮ್ಮ ಧರ್ಮ.

ಪದಗಳ ಅರ್ಥ
ಮಾಯದಮದ- ಯೌವನದ ಸೊಕ್ಕು. ಇಲ್ಲಿ ರಾಜ ಯಾವ ಚೆಲುವನ್ನು ನೋಡಿ ಮನ ಸೋತು ಬಂದನೋ ಆ ಮಾಯಾಕರ್ಷಣೆ ಇಲ್ಲದಂತಾಗಲಿ ಎಂದು ಭಾವ.
ಮುರಿ-ನಾಶ ಮಾಡು.
ಕಾಯದಕತ್ತಲೆ-ದೇಹ ಕಾರಣವಾಗಿ ಬಂದಿರುವ ಅಜ್ಞಾನ, ಜಂಜಡ-ದು:ಖ, ಜನ್ಮ ಕಾರಣವಾಗಿ ಬಂದ ದು:ಖ.
ಮಾಯಾಪ್ರಪಂಚ -ಎಲ್ಲೆಡೆ ಹರಡಿರುವ ಮಾಯಾ. ಅಂದರೆ ನಾನು ಹೋದಲ್ಲೆಲ್ಲ ನಾನು ಹೆಣ್ಣು ನಾನು ಚೆಲುವೆ,ನಾನು ತರುಣಿ ಎನ್ನುವ ಕಾರಣವಾಗಿ ಪುರುಷರಲ್ಲಿ ಉಂಟಾಗುವ ಬಯಕೆಗಳು ಬತ್ತಿಹೋಗಲಿ ಎಂದು ಅರ್ಥ.

ವಚನದ ಅರ್ಥ

ಮಹದೇವಿಯಕ್ಕನವರ ತೀವ್ರ ವೈರಾಗ್ಯ, ಶೋಕಾರ್ತದ ವಚನಗಳು ಅವರ ಅಪಾರ ಭಕ್ತಿ, ಅನುಭಾವ ಕಡುನಿಷ್ಟೆಯನ್ನು ಗಮನಿಸಿದ ಶರಣಶರಣೆಯರು ಮಹಾದೇವಿಯಕ್ಕನ ಬೆಂಬಲಕ್ಕೆ ನಿಂತು ಧೈಯ್ಯ ನೀಡಿದ್ದಾರೆ. ರಾಜನಿಗೆ ವಿವೇಕ ಹೇಳಿದ್ದಾರೆ. ರಾಜ ನೀನು ಇದುವರೆಗೆ ಕಾಡಿದ್ದು ಸಾಕು. ನಿನ್ನದಾರಿ ಹಿಡಿದು ನೀನು ಹೋಗು. ಚತುರ್ವಿಧ ಭೇಧೋಪಾಯ ಗಳನ್ನು ಬಳಸಿದಾಗ ರಾಜ ಪರಿವರ್ತನೆಯಾಗಿ ರಾಜ್ಯಕ್ಕೆ ಹಿಂದಿರುಗಿದ. ಮಾಯೆಯ ಪೀಡೆ ಮುಗಿಯಿತು ಎನ್ನುವ ಮುಕ್ತಾಯದ ಹಂತದಲ್ಲಿ ಇಷ್ಟಲಿಂಗ ಪೂಜೆ ಮಾಡುತ್ತ ಹಾಡಿ ಕೊಂಡ ವಚನ ಇದು. ಮಾಯ,ಕಾಯ, ಜೀವ ಇವುಪರಿಭವಕ್ಕೆ ಮೂಲ. ಇವುಗಳಿಂದ ಬಿಡುಗಡೆ ಆಯಿತು. ದು:ಖವೂ ಮುಗಿಯಿತು. ದುಃಖದ ಮೂಲ ವನ್ನು ಹುಡುಕಿ ದುಃಖನಾಶಕ್ಕೆ ಪ್ರಯತ್ನಿಸಿ ಮೊರೆ ಇಟ್ಟಿರುವ ವಚನ ಇದು. (ಎನ್ನ ಮಾಯದ ಮದ ಮುರಿಯಯ್ಯ. ಮಾಯದಮದ ತುಂಬು ತಾರುಣ್ಯದ ಚೆಲುವು. ಅಕ್ಕಮಹಾದೇವಿಯವರದು ಲೋಕೋತ್ತರವಾದ ಚೆಲುವು. ಈಚೆಲುವಿಗೆ ಮರುಳಾಗಿ ಬಂದವನೇ ಕೌಶಿಕ ಮಹಾರಾಜನು,ಯಾವ ಶರೀರವನ್ನು ನೋಡಿದರೆ ಗಂಡಸರು'ಮೋಹಿತರಾಗುತ್ತಾರೆಯೋ ಅಂತಹ ಆಕರ್ಷಣೆ ಈ ಶರೀರದಲ್ಲಿ ಇಲ್ಲವಾಗಲಿ. ಇದು ಪರಮಾತ್ಮನಲ್ಲಿ ಅಕ್ಕಮಹಾದೇವಿಯವರ ಮೊರೆ ಎನ್ನ ಕಾಯದ ಕತ್ತಲೆಯ ಕಳೆಯಯ್ಯ, ಕಾಯದ ಕತ್ತಲೆ, ಎಂದರೆ ದೇಹ ಕಾರಣವಾಗಿ ಬರುವ ಅಜ್ಞಾನ.ಇದರಿಂದ ಭಯ, ಕಳವಳ, ವಿಕಾರಉಂಟಾಗಿ ಅರಿವು ಹೋಯಿತು.
ನಾನು ಹೆಣ್ಣು ಎನ್ನುವ ಕಾರಣ ಭಯ,ಕಳವಳ ನನ್ನಲ್ಲಿ ಮುಸುಕಿವೆ. ಲೋಕದ ಗಂಡುಗಳಿಗೆ ನನ್ನಲ್ಲಿ ಹೆಣ್ಣುತನ ಕಾಣದೆ ಹೋಗಲಿ. ಎನ್ನ ಜೀವದ ಜಂಜಡವ ಮಾಣಿಸಯ್ಯ.ನಾನು ಜೀವಧರಿಸಿ ಬಂದ ಕಾರಣವಾಗಿಯೆ ಕೆಲವು ದು:ಖಗಳು ಬೆನ್ನು ಹಿಡಿದಿವೆ.ಕಾಯ, ಜೀವ,ಮಾಯ ಸಂಬಂಧದಿಂದಾಗಿ ಲೋಕದಲ್ಲಿ ಸಂಬಂಧ ಗಳುಂಟಾಗಿವೆ. ಈಸಂಬಂಧಗಳು ನಾಶವಾದರೆ,

ಜೀವದ ದು:ಖವೂ ಹೋಗುತ್ತ ದೆ. ಇದನ್ನು ನಿವಾರಿಸು ಎಂದು ಮೊರೆಯಿಟ್ಟಿದ್ದಾರೆ. ಈ ಜೀವ ಹೆಣ್ಣು ದೇಹ ಧರಿಸಿದುದರಿಂದ ಲೋಕದ ಗಂಡಸರು ನನ್ನನ್ನು ಕಾಡುವಂತಾಯಿತು. ಹೆಣ್ಣು ಎನ್ನುವ ಕಾರಣಕ್ಕಾಗಿ ಪುರುಷನ ಅಧೀನದಲ್ಲಿರುವಂತಾಯಿತು. ಈದೇಹ ಕಾರಣವಾಗಿ ಹಸಿ ವು.ತೃಷೆ,
ಜರೆ,ಮರಣ,ರೋಗ,ಮಲ,ಮೂತ್ರ,ಮೈಥುನ ಇತ್ಯಾದಿ ಬೆನ್ನು ಬಿದ್ದಿವೆ. ಆರೋಗ್ಯಕ್ಕೆ, ಆಹಾರಕ್ಕೆ, ರಕ್ಷಣೆಗೆ ಇನ್ನೊಬ್ಬರ ಹಂಗಿನಲ್ಲಿರುವಂತೆ ಮಾಡಿದೆ. ಈಜೀವದ ದು:ಖಗಳು ಹೋಗಲಿ ಪರಮಾತ್ಮನೇ ನಿನ್ನಲ್ಲಿ ಬೇಡಿದ್ದೇನೆ. ಎನ್ನ ಸುತ್ತಿದ ಮಾಯಾಪ್ರಪಂಚವ ಬಿಡಿಸಾ ನಿಮ್ಮ ಧರ್ಮ. ನೀನು ಧರ್ಮಿ ಎಂದು ನಂಬಿ ನಾನು ಶರಣು ಹೊಕ್ಕಿದ್ದೇನೆ. ಮೊದಲು ನನ್ನನ್ನು ಆವರಿಸಿರುವ ಮಾಯೆಯನ್ನು ಬಿಡಿಸು. ಒಂದೊಂದು ಜೀವಕ್ಕೂ ಒಂದೊಂದು ರೀತಿಯ ಮಾಯೆಯ ಆವರಣ ಇದೆ. ಮೊದಲು ಮನುಷ್ಯ ಎನ್ನುವ ಮಾಯೆಯ ಆವರಣ. ನಂತರ ಆಯುಷ್ಯದ ಆವರಣ. ಗಂಡು, ಹೆಣ್ಣು ಎನ್ನುವ ಆವರಣ. ಕಾಲ ದೇಶದ ಆವರಣ. ಇಂತಹ ನೂರು ಆವರಣಗಳು ದೇಹ ಕಾರಣವಾಗಿ ಬಂದಿವೆ, ಇವೆಲ್ಲವೂ ಮಾಯೆ.ಇದರಿಂದ ಪಾರುಮಾಡು ಎಂದು ಚೆನ್ನಮಲ್ಲಿಕಾರ್ಜುನನಲ್ಲಿ ಮೊರೆಯಿಟ್ಟಿದ್ದಾರೆ. ಕಾಯ ಕಾರಣವಾಗಿ ನಮ್ಮಲ್ಲಿ ಆಶೆಗಳು ಹುಟ್ಟುತ್ತವೆ ಈ ಕಾಯ ಕಾರಣವಾಗಿ ಚೆಲುವು ಹೆಣ್ಣಿಗಿದ್ದರೆ ಪುರುಷ ಆಶೆಮಾಡಿ ಬರುತ್ತಾನೆ. ಈ ಎರಡು ರೀತಿಯ ಆಶೆಗಳು ಇಬ್ಬರಲ್ಲಿಯೂ ಹುಟ್ಟದಂತೆ ಮಾಡು.

**3)ಎನ್ನ ಕಾಯಮಣ್ಣು ಜೀವ ಬಯಲು**
**ಆವುದ ಹಿಡಿವೆನಯ್ಯ ದೇವ?**
**ನಿಮ್ಮನಾವ ಪರಿಯಲ್ಲಿ ನೆನೆವೆನಯ್ಯದೇವ,**
**ಎನ್ನ ಮಾಯವ ಮಾಣಿಸಯ್ಯ ಚೆನ್ನ ಮಲ್ಲಿಕಾರ್ಜುನ.**

ವಚನದ ಅರ್ಥ

ಅಕ್ಕಮಹಾದೇವಿಯವರ ವಚನಗಳಲ್ಲಿ ಎದ್ದು ಕಾಣುವ ಲಕ್ಷಣ ಕಾವ್ಯದ ಗದ್ಯ,ನಾದದ ಲಯ. ಇಲ್ಲಿರುವ ಯಾವ ವಚನಗಳಲ್ಲೂ ಕಠಿಣ ಶಬ್ದ ಉಪಯೋಗ ಇಲ್ಲ. ಎಲ್ಲಸರಳ ಮಾತುಗಳು. ಅವರ ವಚನಗಳು ಆಡುಮಾತಿನಷ್ಟೇ ಸರಳವಾಗಿವೆ. ಅಕ್ಕ ಮಹಾದೇವಿಯವರ ಪ್ರತಿಭಾ ನಿಕಷದಲ್ಲಿ ಅಭಿವ್ಯಕ್ತಗೊಳ್ಳುವಾಗ ಅವು ಸೊಗಸಾದ ಭಾವಗೀತೆಯ ಸಾಲುಗಳಾಗಿ ಅಭಿವ್ಯಕ್ತವಾಗುತ್ತವೆ.ಆ ಮಾತುಗಳಿಗೆ ವಿಶೇಷ ಶಕ್ತಿಯೂ ಹೊಸತನವೂ ಬಂದಿದೆ. ಅವರ ಒಂದೊದು ವಚನವು ಒಂದೊಂದು ಶ್ರೇಷ್ಠ ಭಾವಗೀತ. ಅವರ ಜೀವನಾನುಭಾವದ ದು:ಖವೆಲ್ಲವೂ ಭಕ್ತಿ ಕಾವ್ಯವಾಗಿ ಪ್ರಕಟವಾಗಿವೆ. ಅವರ ಒಂದೊಂದು ವಚನದಲ್ಲೂ ದಟ್ಟವಾದ ಜೀವದ್ರವ್ಯ ತುಂಬಿದೆ. ತಪಸ್ಸು ಮಾಡಿದರೆ ದೇವರು ಪ್ರತ್ಯಕ್ಷವಾಗಿ ವರ ಕೊಡುತ್ತಾನೆ ಎಂಬ ಕಥೆಗಳು ಕೇಳಲು ಚೆನ್ನಾಗಿವೆ. ಗೌರಿಯು ಶಂಕರನನ್ನು ಒಲಿಸಿಕೊಂಡು ಲಗ್ನವಾದ ಕಥೆಯೂ ಕಣ್ಣ ಮುಂದಿದೆ' .ಎಂತೆಂತಹ ಮಹಾತ್ಮರೆಲ್ಲ ನಿನ್ನನ್ನು ಒಲಿಸಿಕೊಂಡಿದ್ದಾರೆ. ನಾನೂ ಒಲಿಸಿಕೊಳ್ಳಲೇ ಬೇಕು. ಎನ್ನುವ ಹಠದಿಂದ ಅಕ್ಕಮಹಾದೇವಿಯವರು ಇಷ್ಟಲಿಂಗಪೂಜೆಯಲ್ಲಿ ನಿರತರಾಗಿದ್ದಾರೆ. ಆಗ ತೇಲಿ ಬಂದ

ವಚನ ಇದು. ಅವರ ಭಕ್ತಿಬಾವದ ಬಹಳಷ್ಟು ವಚನಗಳು ಇಷ್ಟಲಿಂಗಪೂಜೆಯಲ್ಲಿದ್ದಾಗ ಹಾಡಿಕೊಂಡವು. ಎನ್ನ ಕಾಯ ಮಣ್ಣು ಜೀವ ಬಯಲು ಆವುದ ಹಿಡಿವೆನಯ್ಯ ದೇವ? ನನ್ನ ದೇಹವನ್ನು ದೃಡವಾಗಿ ಹಿಡಿಯಲೆ ಎಂದರೆ ನನ್ನ ದೇಹವಾದರೂ ಮಣ್ಣಲ್ಲಿ ಮಣ್ಣಾಗುತ್ತದೆ. ನನ್ನ ಕೈಬಿಡುತ್ತದೆ. ಹೋಗಲಿ ನನ್ನಜೀವ ಪ್ರಾಣವನ್ನು, ಹಿಡಿಯುವೆ ಎಂದರೆ ಅದು ಬಯಲಾಗಿ ಹೋಗುತ್ತದೆ. ದೇಹ, ಮನಸ್ಸನ್ನು ಹಿಡಿಯುವ ಹಾಗಿಲ್ಲ. ಅಂದಮೇಲೆ ನಿಮ್ಮನ್ನು ನಾನು ಯಾವ ರೀತಿಯಲ್ಲಿ ನೆನೆಯಲಿ. ಈ ದೇಹಕ್ಕೆ ಮಾಯೆಯಾವರಣ ವ್ಯಾಪಿಸಿಕೊಂಡಿದೆ. ಇದನ್ನು ಬಿಡಿಸು. ಮಾಯೆಯಿಂದ ಬಿಡುಗಡೆಗೊಳಿಸಿದರೆ ನೀನು ದೊರೆಯುವೆ ಎಂದು ನಾನು ನಂಬಿದ್ದೇನೆ. ಪರಮಾತ್ಮನೆ ದೇಹ.ಮನಸ್ಸು ಗಳು ಪ್ರಾಣಾಧೀನ. ಈಪ್ರಾಣವಾದರೋ ಉಸಿರಾಟದ ಮೇಲೆ ನಿಂತಿವೆ. ಈ

ನಿನ್ನ ಸೃಷ್ಟಿಯ ಅಧೀನದಲ್ಲಿದೆ. ಕಾಯ, ಪ್ರಾಣ,ಮನ ಈ ಮೂರೂ ನೆಲೆಗಳಲ್ಲಿ ಕತ್ತಲೆಯೇ ಮುಸುಕಿದೆ. ನನಗೆ ಆ ದಾರಿಬೆಳಕು ಕಾಣುತ್ತಿಲ್ಲ. ಈಕತ್ತಲೆಯನ್ನು ಕೊನೆ ಗಾಣಿಸು ಬೆಳಕು ತೋರು ಅಕ್ಕಮಹಾದೇವಿಯವರ ಸಾಧನೆ ಮುಂದುವರಿದಿದೆ.

4) ಎಮ್ಮೆಗೊಂದು ಚಿಂತೆ ಸಮಗಾರ ಗೊಂದು ಚಿಂತೆ. ಧರ್ಮಿಗೊಂದು ಚಿಂತೆ, ಕರ್ಮಿಗೊಂದು ಚಿಂತೆ
ಎನಗೆ ಎನ್ನ ಚಿಂತೆ . ತನಗೆ ತನ್ನ ಕಾಮದ ಚಿಂತೆ.
ಒಲ್ಲೆ ಹೋಗು ಸೆರಗು ಬಿಡು ಮರುಳೆ
ಎನಗೆ ಚೆನ್ನಮಲ್ಲಿಕಾರ್ಜುನ ದೇವರು,
ಒಲಿವನೊ ಒಲಿಯನೊ ಎಂಬ ಚಿಂತೆ.

ಪದಗಳ ಅರ್ಥ

ಸಮಗಾರ-ಚರ್ಮಹದ ಮಾಡುವವನು.
ಧರ್ಮಿ-ಸದಾಚಾರವಂತ . ಒಳ್ಳೆಯ ರೀತಿನಡೆದುಕೊಳ್ಳುವವನು.
ಕರ್ಮಿ- ಕರ್ಮಮಾಡುವುದರಲ್ಲಿ ನಿರತ. ವಿಶೇಷವಾಗಿ
ತನು ಸುಖಕ್ಕಾಗಿ ಬದುಕುವವನು.

ವಚನದ ಅರ್ಥ

ಅತ್ಯಂತ ಕಡು ಸಂಕಟದಲ್ಲಿ ಎದುರಾದ ಘೋರ ಪರಿಸ್ಥಿತಿಯಲ್ಲಿ ಉಂಟಾದ ವಚನ ಇದು. ಇಂತಹ ವಿಷಮ ಸಂಕಟದಲ್ಲೂ ಆತ್ಮಸ್ಥೆಯವನ್ನು ತಂದುಕೊಂಡು, ದುಷ್ಟಕಾರಕ್ಕೆ ಮುಂದಾದ ರಾಜನನ್ನು ಅಷ್ಟೇ ಶಕ್ತಿಯುತವಾಗಿ ವಿರೋಧಿಸಿ ಪ್ರತಿಭಟಿಸಿದ ವಚನ ಇದು. ಕಾಮಾತುರಾಣಾಂ ನ ಭಯಂ ನ ಲಜ್ಜಂ ಎಂಬ ಮಾತು ಈ (ವಿವೇಕಿ ರಾಜನಿಗೆ ತುಂಬ ಸೂಕ್ತವಾಗಿ ಅನ್ವಯವಾಗುತ್ತದೆ ಕಾಮಾಂಧನಾದ ಈರಾಜ ತನ್ನ ಒಳತೋಟಿಯನ್ನು ಸಂಯಮದಿಂದ ಕಾಪಾಡಿಕೊಳ್ಳಲಾರದೆ,ಔಚಿತ್ಯ ಮೀರಿ ನಡೆದುಕೊಂಡನು.ಅಕ್ಕನವರ ಬದುಕಿನಲ್ಲಾದ ಘೋರ ಅನ್ಯಾಯಗಳನ್ನು' ಈ ವಚನ ಹೇಳುತ್ತದೆ. ಎಮ್ಮೆಗೊಂದು ಚಿಂತೆ

ಸಮಗಾರಗೊಂದು ಚಿಂತೆ. ಎಮ್ಮೆಗೆ ಒಂದೇಚಿಂತೆ.?ಹಸಿರಿದ್ದಲ್ಲಿ ಮೇದು ನೀರಿನಲ್ಲಿ ಉರುಳಾಡುವುದು ಸಮಗಾರನಿಗೆ ಈ ಎಮ್ಮೆಯಚರ್ಮಸುಲಿದು ಹದ ಮಾಡುವ ಚಿಂತೆ ಧರ್ಮಿಗೊಂದು ಚಿಂತೆ ಕರ್ಮಿ ಗೊಂದು ಚಿಂತೆ.ಧರ್ಮಿ ಚಿಂತೆ ಏನು?ಸತ್ಯಶುದ್ಧ ಕಾಯಕ ಮಾಡಿ ಕರ್ತವ್ಯ ತಿಳಿದು ಬಾಳುವೆ ನಡೆಸುವುದು. ಕರ್ಮಿಯಾದವನಿಗೆ ಜೀವನದ ಉದ್ದೇಶಗಳು ಬಹಳ ಇರುವುದಿಲ್ಲ.ದೇಹಕೇಂದ್ರಿತ ಭೋಗದಲ್ಲಿ ಮಾತ್ರ ಅವನಿಗೆ ಅಸಕ್ತಿಹಣ ಅಧಿಕಾರ ಭೋಗ,ಇಂದ್ರಿಯ ವಿಚಾರಗಳ ಸಂತೆಯಲ್ಲಿ ಕಳೆದುಹೋಗಿರುತ್ತಾನೆ.ರಾಜ ಕೌಶಿಕ ಲೌಕಿಕಕ್ಕೆ ಬರದ ಹೆಣ್ಣು ಮಗಳಲ್ಲಿ ಭೋಗಜೀವನ ನಡೆಸಲು ಹೊರಟಿದ್ದಾನೆ. ಇದರಿಂದ ಈತನೂ ದು:ಖಿ, ಈತನ ದೌರ್ಜನ್ಯಕ್ಕೆ ಸಿಕ್ಕಿದವರೂ ದುಃಖಿಗಳು.ಅಕ್ಕ ಮಹಾದೇವಿಯವರಿಗಾದರೂ ಪರಮಾತ್ಮನು ಒಲಿವನೊ ಒಲಿಯನೊ ಎಂಬ ಚಿಂತೆ. ಭಕ್ತಿಮಾರ್ಗ ಯಾವುದು? ಜ್ಞಾನದ ಪಥ ಯಾವುದು?ನನಗೆ ದಾರಿ ಬೆಳಕುಯಲ್ಲಿ? ಈ ತೆರನಾದ ಚಿಂತೆಗಳು ಆಕಾಶದಷ್ಟು ವಿಸ್ತಾರ ಇವೆ. ಒಲ್ಲೆ ಹೋಗು ಸೆರಗು ಬಿಡು ಮರುಳೆ ಎನ್ನುವ ಕಟುನುಡಿಗಳನ್ನಾಡುವಷ್ಟು ಅವನ ವರ್ತನೆ ಉಂಟಾಗಿದೆ. ನಾನು ನಿನ್ನ ಪತ್ನಿಯೂ ಅಲ್ಲ. ನಿನ್ನ ವಿಲಾಸದ ಹೆಣ್ಣೂಅಲ್ಲ.ಸೆರಗು ಹಿಡಿಯುವಷ್ಟು ಮುಂದುವರಿದಿದ್ದಾನೆ.ವಿಲಾಸದ ಈವೇಳೆಯನ್ನು ಪರಮಾತ್ಮನನ್ನು ಒಲಿಸಲು: ತಿಳಿಯಲು ಪ್ರಯತ್ನಿಸು ಎಂದು ವಿವೇಕ ಹೇಳಿದ್ದಾರೆ. ಅವನಿಗಾದರೂ ಅರಿತು ಜೀವನ ಮಾಡು ಎಂದು ಹೇಳಿದ್ದಾರೆ. ಈಲೋಕದಲ್ಲಿ ಹೆಣ್ಣಾಗಿ ಹುಟ್ಟುವುದೂ ಒಂದು ದುಃಖದ ಸಂಗತಿಯೇ ಸರಿ. ಪುರುಷನ ಅಧಿಕಾರದ ಕಪಿಮುಷ್ಟಿಯಲ್ಲಿ ನಲುಗಿದವರೆಷ್ಟೊ?ತಾರುಣ್ಯ, ಲೋಕೋತ್ತರವಾದ ಚೆಲುವು, ರಕ್ಷಕರಿಲ್ಲದಿರು ವುದು, ಪುರುಷನ ದೌರ್ಜನ್ಯಕ್ಕೆ ಬಾಗಿಲು ತೆರೆದಂತೆ.

**5) ಎನಗೇಕಯ್ಯ ನಾ ಪ್ರಪಂಚಿನ ಪುತ್ಥಳಿ !**
ಮಾಯಿಕದ ಮಲಭಾಂಡ !ಆತುರದ ಭವನಿಳಯ .
'ಜಲಕುಂಭದ ಎಡೆಯಲ್ಲಿ ಒಸರುವ ನೆಲೆವನೆಗೇಕಯ್ಯ? ಬೆರಳು ತಾಳಹಣ್ಣ ಹಿಸುಕಿದಡೆ ಮೆಲಲುಂಟೆ? ಬಿತ್ತೆಲ್ಲಾ ಜೀವ ಅದರೊಪ್ಪದ ತೆರ ಎನಗೆ. ಎನ್ನ ತಪ್ಪನೊಪುಗೊಳಿ ಚೆನ್ನಮಲ್ಲಿಕಾರ್ಜುನ ದೇವರ ದೇವನ ಅಣ್ಣಗಳಿರಾ,

ಪದಗಳ ಅರ್ಥ

ಪ್ರಪಂಚ - ಭವ,
ಪುತ್ಥಳಿ -ಮಣ್ಣಿನ ಬೊಂಬೆ,
ಮಾಯಿಕದ ಮಲಭಾಂಡ- ತ್ರಿವಿಧಮ ಲದ ಪಾತ್ರೆ
ಒಪ್ಪ -ಅನುರೂಪ
ಒಸರುವ -ಸೋರುವ

ವಚನದ ಅರ್ಥ

ಅನುಭವ ಮಂಟಪದಲ್ಲಿ ಅಕ್ಕನನ್ನು ಅಲ್ಲಮಪ್ರಭುಗಳು, ಕೊಂಡಾಡಿದಾಗ ಪ್ರತಿಕ್ರಿಯಿಸಿದ ವಚನ ಎನಗೇಕಯ್ಯ ನಾಪ್ರಪಂಚಿನ ಪುತ್ಥಳಿ ! ನನಗೇಕೆ ಹೊಗಳಿಕೆ . ನಾನು ಮಣ್ಣಿನ ಬೊಂಬೆ. ಹುಟ್ಟುಸಾವಿನಲ್ಲಿ ಕರಗಿ ಹೋಗುವವಳು.. ಮಾಯಿಕದ ಮಲಭಾಂಡ ಆತುರದ ಭವನಿಳಯ . ಈ ದೇಹವು ತ್ರಿವಿಧಮಲಗಳ ಪಾತ್ರೆ.. ಹುಟ್ಟುಸಾವಿನ ಜಾತ್ರೆ. ಜಲಕುಂಭದ ಎಡೆಯಲ್ಲಿ ಒಸರುವ ನೆಲೆವನೆಗೇಕಯ್ಯ? ಈ ದೇಹವೊಂದು ಸೋರುವ ಪಾತ್ರೆ . ಬೆರಳು ತಾಳೆ ಹಣ್ಣ ಹಿಸುಕಿದಡೆ ಮೆಲಲುಂಟೆ ? ಬೆರಳಿನಿಂದ ತಾಳೆಹಣ್ಣ ಹಿಸುಕಿದ ಮಾತ್ರಕ್ಕೆ ಮೆಲಿದಂತಾಯಿತೆ. ? ಬಿತ್ತೆಲ್ಲ ಜೀವ ಅದರೊಪ್ಪದ ತೆರ ಎನಗೆ.. ಬೀಜ ಏನಿದೆ ಬಿತ್ತೆಲ್ಲವೂ ಜೀವವೆ . ಅದರಂತೆ ನಾನು. ಎನ್ನ ತಪ್ಪನೊಪ್ಪುಗೊಳ್ಳಾ. ನನ್ನ ದೋಷವೇನಿದ್ದರೂ ಇದ್ದಂತೆ ಸ್ವೀಕರಿಸಿ ಮನ್ನಿಸಿ . ಚೆನ್ನಮಲ್ಲಿಕಾರ್ಜುನ ದೇವರ ದೇವನ ಅಣ್ಣಗಳಿರಾ, ನೀವು ಚೆನ್ನಮಲ್ಲಿಕಾರ್ಜುನನಿಗೂ ಅಣ್ಣನಿದ್ದಂತೆ. ಅಕ್ಕಮಹಾದೇವಿಯವರಿಗೆ ಬೇಕಾಗಿರು ವುದು ಹೊಗಳಿಕೆ ತೆಗಳಿಕೆಗಳಲ್ಲ. ಪರಮಾತ್ಮ ಬೇಕು. ಪರಮಾತ್ಮನೆ ಸರ್ವಸ್ವ...

6)ಎರೆಯಂತೆ ಕರಕರಗಿ ಮಳಲಂತೆ ಜರಿಜರಿದು
ಕನಸಿನಲಿ ಕಳವಳಿಸಿ ನಾನು ಬೆರಗಾದೆ.
ಆವಿಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ
ಆಪತ್ತಿಗೆ ಸಖಿಯರನಾರನು ಕಾಣೆ
ಅರಸಿ ಕಾಣದ ತನುವ ಬೆರಸಿ ಕೂಡದ ಸುಖವ,
ಎನಗೆ ನೀ ಕರುಣಿಸಾ ಚೆನ್ನಮಲ್ಲಿಕಾರ್ಜುನಾ.

ಪದಗಳ ಅರ್ಥ

ಎರೆ-ಜೇಡಿಮಣ್ಣು,
ಕರಕರಗಿ- ಕರಗಿಹೋಗಿ,
ಜರಿಜರಿದು- ಹರಿದುಹೋಗಿ,
ಕಳವಳ-ಕಾತುರ,ಹಂಬಲ
ಬೆರಗು-ಆಶ್ಚಯ್ಯ,
ಆವಿಗೆ-ಸುಣ್ಣಮಡಕೆ ಸುಡುವ ಒಲೆ,
ಸುಳಿಸುಳಿದು-ಪ್ರಾರ್ಥಿಸಿ, ಕಳವಳಿಸಿ ಆಪತ್ತು-ಕಷ್ಟಕಾಲ,
ಸಖಿಯರು-ಅರಮನೆಯ ಸೇವಕಿಯರು, ಅರಸಿ-ಹುಡುಕಿ,
ಬೆರಸಿ - ಒಂದಾಗಿ,
ಕರುಣಿಸಿ-ದಯೆತೋರು, ಅನುಗ್ರಹಿಸು.

ವಚನದ ಅರ್ಥ

ಈ ವಚನದಲ್ಲಿ ನಾದ, ಲಯ, ಗಾನ, ಭಕ್ತಿ, ವಿರಹ ಭಾವ, ಭಾವಗೀತೆಯಾಗಿ ಹೊರಹೊಮ್ಮಿದೆ. ಅವರು ಕೊಡುವ ದೃಷ್ಟಾಂತಗಳನ್ನು ಗಮನಿಸಿದರೆ ಅವರು ಎಷ್ಟೊಂದು ಸಮಕಾಲೀನ ವಿವರಗಳನ್ನು ಗ್ರಹಿಸಿದ್ದರು ಎಂದು ಆಶ್ಚರ್ಯವಾಗುತ್ತದೆ.ಸಣ್ಣಸಣ್ಣ ಸಂಗತಿಗಳನ್ನು ಉದಾಹರಿಸಿ ಚಿತ್ರವತ್ತಾದ' ಪರಿಣಾಮಕಾರಿ ದೃಶ್ಯ ನೀಡುತ್ತಾರೆ. ಪರಮಾತ್ಮನ ಹಂಬಲದ ವಿರಹದ ವಚನಗಳು ಅಕ್ಕ ಮಹಾದೇವಿಯರಲ್ಲಿ ಅಮೋಘ. ಆ ಎಳೆಯ ಯೌವನದ ಮನಸ್ಸು ಗೌರಿಗೆ ಶಂಕರನು ಸಿಕ್ಕಿದಂತೆ ನನಗೂ ಸಿಕ್ಕಿಬಿಡುತಾನೆ ಎಂಬ ಮುಗ್ಧ ಭಕ್ತಿಯಲ್ಲಿ ಅದೆಷ್ಟು ಪೂಜೆ ಮಾಡಿದ್ದಾರೆ. ಅದೆಷ್ಟು ಹಂಬಲಿ ಸಿದ್ದಾರೆ. ಅವರ ಕಂಬನಿ ಕನವರಿಕೆ ಆಕಾಶವನ್ನೆಲ್ಲ ವ್ಯಾಪಿಸುವಂಥದು. ಸಮುದ್ರ ವನ್ನೆಲ್ಲ ತುಂಬುವಂಥದು. ಭಾವತೀವ್ರತೆಯಿಂದಾಗಿ ಅವರ ಒಂದೊಂದು ವಚನವೂ ಭಾವಗೀತೆಯಾಗಿ, ಕಾವ್ಯಗಂಗೆ ಯಾಗಿ ಹರಿದಿದೆ. ಹೆಣ್ಣಾಗಿ ಹುಟ್ಟಿದ್ದರೂ,ಅವರು ಕಾಣುವ ಜಗತ್ತಿನಲ್ಲೆಲ್ಲ ವಿಶೇಷವಾದುದನ್ನು ಕಾಣುತ್ತಾರೆ. ರವಿಕಾಣದುದನ್ನು ಕವಿಯಾಗಿ ಕಾಣುತ್ತಾರೆ. ಇತರರು ಗ್ರಹಿಸಲಾರದುದನ್ನು ಗ್ರಹಿಸುತ್ತಾರೆ . ಅವರ ಭಾವಕೋಶದಲ್ಲಿ ಇವು ದೃಷ್ಟಾಂತಗಳಾಗಿ ಉಪಮೆಗಳಾಗಿ ಪ್ರಕಟವಾಗುತ್ತವೆ.ಎರಯಂತೆ ಕರಕರಗಿ ಮಳಲಂತಜರಿಜರಿದು ಕನಸಿನಲಿ ಕಳವಳಿಸಿ ನಾನುಬೆರಗಾದೆ. ಎರೆ ಮಣ್ಣು ನೀರಿನಲ್ಲಿ ಕರಗಿ ಹೋಗುವಂತೆ,ಹೊಳೆಯ ನೀರಿನಲ್ಲಿ ಮಳಲು
ನೀರಿನಲ್ಲಿ ಸರಿದು ಹೋಗುವಂತೆ ನಾನು ಕನಸಿನಲ್ಲಿ ಸದಾ ನಿನ್ನನ್ನೆ ಕಾಣುತ್ತ ಕರಗಿ ಹೋಗುತ್ತಿದ್ದೇನೆ. ಮರಳು,ಎರೆ ಎರಡೂ ಸುಂದರ ದೃಷ್ಟಾಂತಗಳು, ಬಾಲ್ಯಕಾಲ ದಲ್ಲಿ ಮಳೆಬಿದ್ದಾಗ ನೀರಿನಲ್ಲಿ ಆಟವಾಡಿದ್ದರು. ಆಗ ಮಳೆನೀರಿನಲ್ಲಿ ಮರಳು ಕೊಚ್ಚಿ ಹೋಗುವುದನ್ನು ಗಮನಿಸಿದ್ದರು. ಅಂತೆಯೆ ಹೊಲಗದ್ದೆಗಳಲ್ಲಿ ಎರೆಮಣ್ಣು ಕರ ಗುವುದನ್ನು ಕಂಡಿದ್ದರು. ಆ ದೃಶ್ಯಗಳನ್ನು ಇಲ್ಲಿ ರೂಪಕಗಳಾಗಿ ಬಳಸಿಕೊಂಡಿದ್ದಾರೆ. ಅಕ್ಕನವರು ಈಗ ಪರಮಾತ್ಮನ ಪ್ರೀತಿಯಲ್ಲಿ ಕರಗಿಹೋಗುತ್ತಿದ್ದಾರೆ. ಆ ಪ್ರೀತಿ ನನ್ನನ್ನು ದಿನೆ ದಿನೆ ಕರಗಿಸುತ್ತಿದೆ. ಪರಮಾತ್ಮನನ್ನು ಪತಿಯಾಗಿ ಪಡೆಯುವ ಪ್ರೀತಿ ಅಕ್ಕನವ ರಲ್ಲಿ ಹುಟ್ಟಿದ್ದು ಅವರಿಗೂ ಒಂದು ಬೆರಗು. ಈ ಪ್ರೀತಿ ಸಾಧ್ಯವೆ?ನನಗೆ ಅವನು ದೊರೆಯುವನೆ? ಆವಿಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ. ಆವಿಗೆ ಎಂದರೆ ಮಡಕೆ, ಸುಣ್ಣ, ಇಟ್ಟಿಗೆ ಇವುಗಳನ್ನು ಭಟ್ಟಿ ಒಲೆಯಲ್ಲಿ ಸುಡುವ ಒಂದು ವಿಧಾನ. ಈ ಒಲೆಯ ಸುಡು ಝಳ ಎಷ್ಟಿರುತ್ತದೆ ಎಂದರೆ ಅಪರಿಮಿತವಾದುದು. ಹೊರಗೆ ಬೆಂಕಿ,ಹೊಗೆ ಒಂದಿಷ್ಟೂ ಕಾಣುವುದಿಲ್ಲ. ಆದರೆ ಅದರ ಸುಡು ಝಳ ಮಾತ್ರ ಹೇಳಲಸದಳವಾದುದು. ಒಳಗೆ ಬೇಯಿಸಿ ಸುಟ್ಟು ಬಿಡುತ್ತದೆ. ಆ ಭಟ್ಟಿ ಒಲೆಯನ್ನು ಕಿತ್ತು ನೋಡಿದಾಗ ಮಾತ್ರ ಗೊತ್ತಾಗುತ್ತದೆ. ಈ ಒಲೆ ಎಷ್ಟೊಂದು ಒಳಗೆ ಬೇಯಿ ಸಿದೆ ಎಂದು . ಹಾಗೆ ಅಕ್ಕಮಹಾದೇವಿಯವರು ಪರಮಾತ್ಮನ ಪ್ರೀತಿಯ ವಿರಹ ದಲ್ಲಿ ಒಳಗೆ ಬೆಂದುಹೋಗಿದ್ದಾರೆ. ಯಾರಿಗೂ ಹೇಳಿಕೊಳ್ಳುವಂತಿಲ್ಲ. ಹೇಳಿಯೂ ಪ್ರಯೋಜನವಿಲ್ಲ. ಇದರಿಂದ ಅಪಹಾಸ್ಯ, ನಗೆಚಾಟಿಕೆ ಸಿಗುತ್ತದೆ. ಆ ಪ್ರೀತಿ ದಿನೆ ದಿನೆ ಅಧಿಕವಾಗುತ್ತಹೋಗುತ್ತಿದೆ. ಮಾಡಬೇಕೇನು? ಆ ಪ್ರೀತಿ ಒಂದಿಷ್ಟು ಕಡಿಮೆ ಯಾಗುತ್ತಲೆ ಇಲ್ಲ. ಎಷ್ಟು ತಡೆದರು ಪ್ರೀತಿ ಅಧಿಕಗೊಳ್ಳುತ್ತಲೆ ಇದೆ.ಪರಮಾತ್ಮನ ಪ್ರೀತಿಯ ಸುಡುವಿರಹ ಒಳಗೆ ಅಕ್ಕನವರನ್ನು ಸುಡುತ್ತಲೆ ಇದೆ. ಅವನನ್ನುಳಿದು ಅವ ರಿಗೆ ಬೇರೇನೂ ಬೇಡ. ಜೀವನದಲ್ಲಿ ಅವನನ್ನುಳಿದು ಬೇರೇನೂ ರುಚಿಸದು. ಈಗ ಅವರಿಗೆ ಪರಮಾತ್ಮ ಕೂಡಲೆ ಬೇಕು. ಅವನನ್ನು ನೋಡುವ ಮಾತಾಡುವ ಜೊತೆ ಯಲ್ಲಿಯೆ ಇರುವ ಆಮೋದ ಪ್ರಮೋದಗಳು ಬೇಕು. ಅವನಿಗೆ ತಮ್ಮನ್ನೆ ಅರ್ಪಣ ಮಾಡಿಕೊಳ್ಳಲು ಅವರು ಸಿದ್ದರಿದ್ದಾರೆ. ಆದರೆ ಈಗ ಪರಮಾತ್ಮ ನೋಡಲು ಸಿಗುತಿಲ್ಲ. ಈ ಪ್ರೀತಿ, ವಿರಹ ಯಾರಲ್ಲಿ ಹೇಳಿಕೊಳ್ಳಲಿ.?

7)ಎಲೆ ಅಣ್ಣ ನೀವು ಮರುಳಲ್ಲ ಅಣ್ಣ ಎನ್ನ ನಿನ್ನಳವೆ? ಹದಿನಾಲ್ಕು ಲೋಕವ ನುಂಗಿದ ಕಾಮನ ಬಾಣದ ಗುಣ.. ವಾರುವ ಮುಗ್ಗಿದಡೆ ಮಿಣಿಯ ಹರಿಯ ಹೊಯ್ವರೆ?
ಮುಗ್ಗಿದ ಭಂಗವ ಮುಂದೆ ರಣದಲ್ಲಿ ತಿಳಿವುದು.
ನಿನ್ನನೀ ಸಂವರಿಸಿ ಕೈದುವ ಕೊಳ್ಳಿರಣ್ಣ
ಚೆನ್ನಮಲ್ಲಿಕಾರ್ಜುನನೆಂಬ ಹಗೆಗೆ ಬೆಂಗೊಡದಿರಣ್ಣ.

ಪದಗಳ ಅರ್ಥ

ಅಳವು-ಸಾಮರ್ಥ್ಯ,ವಾರುವ ಕುದುರೆ,
ಮುಗ್ಗಿದಡೆ- ಮುಗ್ಗರಿಸಿದರೆ.
ಮಿಣಿ-ಕಣ್ಣಿಲಗಾಮು, ಹರಿ-ಕಿತ್ತು,
ಹೊಯ್-ಹೊಡೆ,
ಮುಗ್ಗಿದ-ತಪ್ಪಿ ಬಿದ್ದ,
ಭಂಗ-ಕಷ್ಟ ,ಅಪಮಾನ,
ರಣ-ಯುದ್ಧ,
ಹಗೆ-ಶತ್ರು,
ಬೆಂಗೊಡದಿರು-ಹಿಮ್ಮೆಟ್ಟದಿರು.

ವಚನದ ಅರ್ಥ

ಎಲೆ ಅಣ್ಣ ನೀವು ಮರುಳಲ್ಲ. ಅಣ್ಣ ಎನ್ನ ನಿನ್ನಳವೆ ? ಹದಿನಾಲ್ಕು ಲೋಕವ ನುಂಗಿದ ಕಾಮನ ಬಾಣದ ಗುಣ.ಕೇಳು ಅಣ್ಣನೀನು ಹುಚ್ಚ ಅಲ್ಲ. ನಿನ್ನ ನನ್ನ ಅಳವಿಗೆಬ ಮೀರಿದ್ದು.
ಹದಿನಾಲ್ಕು ಲೋಕವನೆಲ್ಲ ನುಂಗಿದನಲ್ಲ ಕಾಮ ಅವನ ಆಟ ಇದು ವಾರುವ ಮುಗ್ಗಿದಡೆ ಮಿಣಿಯ ಹರಿಯ ಹೊಯ್ಕರೆ? ಮುಗ್ಗಿದ ಭಂಗವ ಮುಂದೆ ರಣದಲ್ಲಿ ಕಾಣುವುದು. ಕುದುರೆ ಓಡುವಾಗ ಮುಗ್ಗರಿಸಿತು ಎಂದು ಚಾಟಿ ಕಿತ್ತು, ಹರಿದು ಹೋಗುವವರೆಗೆ ಹೊಡೆಯುವರೆ ? ಇಲ್ಲ. ಮುಗ್ಗರಿಸಿದ ಕಷ್ಟವನ್ನು ಮುಂದೆ .ಕುದುರೆ ರಣರಂಗದಲ್ಲಿ ಹೇಗೆ ಸಹಕರಿಸುತ್ತದೆ ಎಂದು ನೋಡಬೇಕು. ನಿನ್ನ ನೀ ಸಂವರಿಸಿ ಕೈದುವ ಕೊಳ್ಳಿರಣ್ಣ. ನಿನ್ನನ್ನು ನೀನು ಸಮಾಧಾನಿಸಿಕೊ.ಚೆನ್ನಮಲ್ಲಿಕಾರ್ಜು ನನೆಂಬ ಹಗೆಗೆ ಬೆಂಗೊಡದಿರಣ್ಣ. ಶತ್ರು ಯಾರೆಂದು ತಿಳಿದಿ. ಚೆನ್ನಮಲ್ಲಿಕಾರ್ಜುನ ಶತ್ರು. ಆತ ತಂತ್ರಹೂಡಿ ಕಾಮನನ್ನು ಮುಂದು ಮಾಡಿದ್ದಾನೆ. ನಾವು ಅವನನ್ನು ಗೆಲ್ಲಬೇಕು. ನಡಿ ಇಬ್ಬರೂ ಅವನ ವಿರುದ್ಧ ಹೋರಾಡೋಣ.ಅಕ್ಕ ಹಾದೇವಿಯವ ರಲ್ಲಿ ಅಪಾರ ಹೃದಯ ವೈಶಾಲ್ಯತೆಯಿದೆ. ತಮ್ಮ ಜೀವನದಲ್ಲಿ ಅನೇಕರು ಆಟವಾಡಲು ಬಂದರು .ಅದರೆ ಅಕ್ಕನವರು ಅವುಗಳನ್ನೆಲ್ಲ ಗೆದ್ದು, ತಿದ್ದಿ ಕ್ಷಮಿಸಿದರು. ಅಂತ ಹವರಿಗೆ ಅದರಲ್ಲೂ ಅನುಭಾವಜೀವನದಲ್ಲಿ ದಾರಿ ತಪ್ಪುವಂತಹವರಿಗೆ ಬಹಳ ತಿಳಿ ವಳಿಕೆ ಹೇಳಿದರು. ಈವಚನ ಅಂಥದು. ಅವರ ಮನಸ್ಸು ನಿರಾಳ, ಶುದ್ಧ. ಪಶ್ಚಾ ತ್ತಾಪ ಪಟ್ಟವರಿಗೆ ಸಮಾಧಾನವನ್ನು ಹೇಳಿದ್ದಾರೆ. ವಚನ ಓದಿದರೆ ಅರ್ಥವಾಗುತ್ತದೆ ಅಷ್ಟು

ಸರಳವಾಗಿದೆ. ಅಣ್ಣ ತಪ್ಪು ನಿಮ್ಮದಲ್ಲ. ಲೋಕವನ್ನೆಲ್ಲ ಹುಚ್ಚರನ್ನಾಗಿ ಮಾಡು ತ್ತಿದ್ದಾನಲ್ಲ ಆ ಕಾಮ . ಅವನ ಪ್ರಭಾವ ತಪ್ಪು ಅವನದು. ನಿಮ್ಮದಲ್ಲ. ರಣದಲ್ಲಿ ಓಡುವ ಕುದುರೆ ಮುಗ್ಗರಿಸಿದರೆ ಅದರ ಮಿಣಿಕಿತ್ತು ಅದನ್ನು ಸಾಯುವವರೆಗೆ ಹೊಡೆ ಯುವರೆ ಇಲ್ಲ. ಮುಗ್ಗರಿಸಿದ ಕುದುರೆ ಯುದ್ಧರಂಗದಲ್ಲಿ ಹೇಗೆ ಓಡುತ್ತದೆ ಎಂಬುದರ ಮೇಲೆ ಅದರ ಅತಿಶಯವಿದೆ. ನಮ್ಮ ಶತ್ರುಯಾರು ಗೊತ್ತೆ? ಅವನು ಚೆನ್ನಮ ಲ್ಲಿಕಾರ್ಜುನನು. ಅವನಿಗೆ ಬೆನ್ನು ಕೊಟ್ಟು ಓಡದಿರಿ.ಎಲ್ಲ ಅವನ ಆಟ. ನಮ್ಮನ್ನು ಹೆದರಿಸಿ ಓಡಿಸಲು ದಾರಿ ತಪ್ಪಿಸಲು ಅವನು ಈ ಎಲ್ಲ ತಂತ್ರವನ್ನು ಭಕ್ತರ ಮೇಲೆ ಹೂಡಿದ್ದಾನೆ. ನೀವೇನು ಈಗ ಎಡವಿದಿರಿ ಅದನ್ನು ಅನುಭಾವದಲ್ಲಿ ಅವನನ್ನು ಗೆಲ್ಲುವ ಮೂಲಕ ನಿಮ್ಮ ಧೈಯವನ್ನು ತೋರಿಸಿ; ಎಂತಹ ವಿವೇಕ ನೋಡಿರಿ. ಅನುಭಾವ ಒಂದು ಯುದ್ಧ ಆಮಿಷವೆ ಶತ್ರು. ಮನಸ್ಸು ಶಸ್ತ್ರ. ಧ್ಯಾನವೇ ಬಾಣ. ಆಕರ್ಷಣೆಯೆ ಶತ್ರುವಿನ ತಂತ್ರ. ಇಂದ್ರಿಯನಿಗ್ರಹವೆ ವಿಜಯ. ಶರಣಾಗತಿಯೆ ವೀರತ್ವ, ನಿರ್ಮ ಲತ್ವ, ಪರಿಶುದ್ಧಿಗಳೇ ಪರಿಪೂರ್ಣ ಯುದ್ಧ. ಚಿತ್ತ ಸಮತೆಯೆ ಧೀರತ್ವ. ಇದು ಅನು ಭಾವ ಯುದ್ಧ. . ಇಂತಹ ವೀರ ವಿರಾಗಿನಿ ಅಕ್ಕಮಹಾದೇವಿಯವರನ್ನು ಶರಣ ಲಾಂಛನಧಾರಿಗಳು ಕೂಡ ಲೌಕಿಕ ರಂತೆ ವಿಷಯಾತುರರಾಗಿ ಲಗ್ನ ಮಾಡಿಕೊಳ್ಳುತ್ತೇನೆ ಎಂದು ಕಾಡಿದರು. ಇಷ್ಟೊಂದು ಕಾಡಾಟಗಳು ಎದುರಾದರೂ ಎಲ್ಲವನ್ನು ಇಕ್ಕಿಮೆಟ್ಟಿದರು ಇದೀಗ ಅಕ್ಕನವರ ವೈರಾಗ್ಯ ಎಷ್ಟು ಹಿರಿದು ಎನ್ನಲು ಇವೆಲ್ಲ ಉದಾಹರಣೆಗಳು. ಲೌಕಿಕ ಬಿಟ್ಟು ಪರಮಾರ್ಥದ ಆನಂದ ಸವಿಯಲು ಬಂದರೆ ಉದ್ದಕ್ಕೂ ಇಂತಹ ಅಡೆತಡೆಗಳೆ ಅವರಿಗೆ ಎದುರಾದವು. ಇದರಿಂದ ಅವರ ಧೀರ ವೈರಾಗ್ಯ ಜಗತ್ತಿಗೆ ತಿಳಿಯಿತು.

8)ಎಲ್ಲಿ ಹೋದರೂ ಕಲಿಗೆ ಭಯವಿಲ್ಲ. ಹೇಡಿಗೆ ಸುಖವಿಲ್ಲ. ಈವಂಗವಗುಣವಿಲ್ಲ. ಕರುಣವುಳ್ಳವಂಗೆ ಪಾಪವಿಲ್ಲ.
ನಿಮ್ಮ ಮುಟ್ಟಿ ಪರಧನ, ಪರಸ್ತ್ರೀಯ ತೊರೆದಾತಂಗೆ
ಮುಂದೆ ಭಯವಿಲ್ಲ ಚೆನ್ನಮಲ್ಲಿಕಾರ್ಜುನ.

ಪದಗಳ ಅರ್ಥ

ಕಲಿ-ವೀರ,
ಈವಂಗೆ-ದಾನಿಗೆ,
ಅವಗುಣ-ದೋಷ,
ಕರುಣ-ದಯೆ,
ಪಾಪ-ಕೇಡು,ನಾಶ .
ಮುಟ್ಟಿ-ಒಪ್ಪಿ, ಸ್ವೀಕರಿಸಿ.

ವಚನದ ಅರ್ಥ

ಎಲ್ಲಿ ಹೋದರೂ ಕಲಿಗೆ ಭಯವಿಲ್ಲ. ಹೇಡಿಗೆ ಸುಖವಿಲ್ಲ ವೀರನಾದವನು ಎಲ್ಲಿಯ ಹೋಗಲಿ ಭಯವಿಲ್ಲ. ಹೇಡಿಯಾದವನು ಎಲ್ಲಿ ಹೋದರೂ ಸುಖವಿಲ್ಲ ಈಮಗ ವಗುಣವಿಲ್ಲ ಕರುಣವುಳ್ಳವಂಗೆ ಪಾಪವಿಲ್ಲ ಕೊಡುವ ಗುಣವಿದ್ದವನಿಗೆ ಕೆಟ್ಟ ಗುಣಗಳಿರುವು ದಿಲ್ಲ. ಯಾರಲ್ಲಿ ದಯೆ ಇದೆ ಅವರಿಗೆ ಪಾಪವಿಲ್ಲ. ನಿಮ್ಮ ಮುಟ್ಟಿ 'ಪರಧನ ಪರಸ್ತ್ರೀಯ ತೊರೆದಾತಂಗೆ ಮುಂದೆ ಭಯವಿಲ್ಲ. ಯಾರು ಪರಮಾತ್ಮನನ್ನು ದೃಢವಾಗಿ ಹಿಡಿದಿದ್ದಾರೆ. ಅವರು ಪರಧನ ಪರಸ್ತ್ರೀಯನ್ನು ತೊರೆದರೆ ಅವರಿಗೆ ಯಾವಾಗಲೂ ಭಯವಿಲ್ಲ ಮನುಷ್ಯ ನಿಗೆ ಯಾವ ಗುಣಗಳಿದ್ದರೆ ತೇಜಸ್ಸು, ಉನ್ನತಿ ಸಾಧ್ಯ ಎಂಬುದನ್ನು ಈ ವಚನ ಹೇಳುತ್ತದೆ ಮನುಷ್ಯ ಹೇಡಿಯಾಗಬಾರದು. ಹೇಡಿಯಿಂದ ಜೀವನದಲ್ಲಿ ಏನೂ ಸಾಧಿಸಲಾಗುವುದಿಲ್ಲ

ಇದುಮನುಷ್ಯನ ಅಪದೆಸೆಗೆ ಕಾರಣವಾಗಿ, ಪ್ರಗತಿ ಕುಂಠಿತವಾಗುತ್ತದೆ . ಎಷ್ಟೋಸಲ ಇರುವುದನ್ನು ಕಳೆದುಕೊಳ್ಳಬೇಕಾದ ಹೀನದೆಸೆ ಬರುತ್ತದೆ ಅವನು ಸುಖವಾಗಿ ಜೀವಿಸಲಾರ ಇತರರಿಗೂ ಸುಖಕೊಡಲಾರ ಉದಾರ ಚ ರಿತನಾದ ಮನುಷ್ಯನಲ್ಲಿ ವಿವೇಕದ ಜೊತೆಗೆ ಇತರೆ ನಾಲ್ಕು ಗುಣಗಳಿರಬೇಕು.ವೀರ, ದಾನ, ದಯಾ, ಗುಣ ಬೇಕು. ಜೊತೆಗೆ ಪರಧನ, ಪರಸ್ತ್ರೀ ಮುಟ್ಟದ ನಿಗ್ರಹ ಗುಣವಿರಬೇಕು

**9)** ಎಲ್ಲರ ಪ್ರಾಣ ಅಂಗೈಲಿದೆ. ಎನ್ನ ಪ್ರಾಣ ಜಂಗಮದಲ್ಲಿದೆ.
ಎಲ್ಲರ ಆಯುಷ್ಯ ಶಿರದಲ್ಲಿ ಬರೆದಿದೆ ಎನ್ನ ಆಯುಷ್ಯ ನಿಮ್ಮಲ್ಲಿ ಸಂದಿದೆ. ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರೆನ್ನ ಪ್ರಾಣಲಿಂಗವೆಂದು ಧರಿಸಿದನು.

ವಚನದ ಅರ್ಥ

ಎಲ್ಲರ ಪ್ರಾಣ ಅಂಗೈಲಿದೆ ಎನ್ನ ಪ್ರಾಣ ಜಂಗಮದಲ್ಲಿದೆ. ವೀರಶೈವ ಲಿಂಗಾಯತ ಅನುಯಾಯಿಗಳ ಪ್ರಾಣ ಅವರು ಅಂಗೈದಲ್ಲಿ ಧರಿಸಿರುವ ಇಷ್ಟಲಿಂಗದಲ್ಲಿದೆ. ನನ್ನ ಪ್ರಾಣವು ಈ ಲಿಂಗದರಿವು ನೀಡಿದ ಜಂಗಮದಲ್ಲಿದೆ. ಎಲ್ಲರ ಆಯುಷ್ಯ ಶಿರದಲ್ಲಿ ಬರೆದಿದೆ. ಎನ್ನ ಆಯುಷ್ಯ ನಿಮ್ಮಲ್ಲಿ ಸಂದಿದೆ. ಎಲ್ಲರ ಆಯುಷ್ಯ ವಿಧಿಲಿಖಿತ. ಆದರೆ ನನ್ನ ಆಯಷ್ಯವು ನಾನು ಧರಿಸಿರುವ,ಇಚ್ಛೆಪಟ್ಟಿರುವ ಚೆನ್ನಮಲ್ಲಿಕಾರ್ಜುನನ ಕೈಲಿದೆ. ಚೆನ್ನಮಲ್ಲಿಕಾರ್ಜು ನಯ್ಯ ನಿಮ್ಮ ಶರಣರನ್ನ ಪ್ರಾಣಲಿಂಗವೆಂದು ಧರಿಸಿದೆನು. ಚೆನ್ನಮಲ್ಲಿಕಾರ್ಜುನನೆ

ಶರಣರು ನನಗೆ ಪ್ರಾಣಲಿಂಗವೆಂದಿ ಇಷ್ಟಲಿಂಗವನ್ನು ಅಂಗೈಯಲ್ಲಿ ಧರಿಸಿದೆನು. ಈ ವಚನದಲ್ಲಿ ಅಕ್ಕಮಹಾದೇವಿಯವರು ಭಕ್ತಿ ಆಯುಷ್ಯ,ಉದ್ದೇಶಗಳನ್ನು ವಿವರಿಸಿದ್ದಾರೆ. ಲೋಕದ ಜನರಭಕ್ತಿ ಆಯುಷ್ಯ, ಉದ್ದೇಶಗಳಿಗೂ ತಮ್ಮ ಜೀವನ ಉದ್ದೇಶಗಳಿಗೂ ಇಲ್ಲಿ ಹೋಲಿಕೆ ಮಾಡಿಕೊಂಡಿದ್ದಾರೆ. ಎಲ್ಲರ ಪ್ರಾಣ ಕರದ ಇಷ್ಟಲಿಂಗದಲ್ಲಿದ್ದರೆ ತಮ್ಮ ಪ್ರಾಣವು ಜ್ಞಾನಿ,ಮಹಾತ್ಮರಾದ ಜಂಗಮದಲ್ಲಿದೆ ಎನ್ನುತ್ತಾರೆ. ಎಲ್ಲರ ಆಯುಷ್ಯ ಅವರ ಹಣೆಯಲ್ಲಿ ಬರೆದಿದೆ. ಆದರೆ ನನ್ನ ಆಯುಷ್ಯ ಪರಮಾತ್ಮನಲ್ಲಿದೆ ಅವನು ಬಾ ಎಂದ ಕೂಡಲೆ ಹೊರಡಲು ಸಿದ್ಧಳಾಗಿದ್ದೇನೆ. ಪರಮಾತ್ಮನೆ ನಿಮ್ಮ ಶರಣರು ನನಗೆ ಪ್ರಾಣ ಲಿಂಗವಾಗಿದ್ದಾರೆ. ಇದು ನನ್ನ ಜೀವನವಾಗಿದೆ.

**10)** ಎನ್ನ ಮನವ ಮಾರುಗೊಂಡನವ್ವ .

ಎನ್ನ ತನುವ ಸೂರೆಗೊಂಡನವ್ವ.
ಎನ್ನ ಸುಖವ ಒಪ್ಪುಗೊಂಡನವ್ವ.
ಎನ್ನ ಇರವ ಇಂಬುಗೊಂಡನವ್ವ.
ಚೆನ್ನಮಲ್ಲಿಕಾರ್ಜುನನ ಒಲುಮೆಯವಳಾನು

ವಚನದ ಅರ್ಥ

ಎನ್ನ ಮನವ ಮಾರುಗೊಂಡನವ್ವ. ನನ್ನ ಮನಸ್ಸನ್ನು ಮಾರಿಕೊಳ್ಳುವಂತೆ ಮಾಡಿದ. ಎನ್ನತನುವ ಸೂರೆಗೊಂಡನವ್ವ. ಎನ್ನದೇಹವನ್ನು ಅವನು ಮುಕ್ಕಿದ ಎನ್ನ ಸುಖವನೊಪ್ಪುಗೊಂಡನವ್ವ, ಎನ್ನ ಸುಖ ಅವನಿಗೆ ಒಪ್ಪಿಗೆಯಾಯಿತು. ಎನ್ನ ಇರವ ಇಂಬುಗೊಂಡನವ್ವ.. ನನ್ನ ನಿಜಸ್ಥಿತಿಯನ್ನು ಅವನು ಸ್ವೀಕಾರ ಮಾಡಿದ. ಚೆನ್ನಮಲ್ಲಿ ಕಾರ್ಜುನನ ಒಲುಮೆಯವಳಾನು. ನಾನು ಚೆನ್ನಮಲ್ಲಿಕಾರ್ಜುನ ದೇವರ ದೇವನಿಗೆ ಪ್ರೀತಿಯವಳು.ಅಲೌಕಿಕವಾದ ಪ್ರೀತಿ, ಪ್ರೇಮ, ವಿರಹದ ಸಂಗತಿಗಳನ್ನು ಹೇಳುವ ವಚನವಿದು.

11)ಎರದ ಮುಳ್ಳಿನಂತೆ ಪರಗಂಡರೆನಗವ್ವಾ.
ಸೋಂಕಲಮ್ಮೆ ಸುಳಿಯಲಮ್ಮೆ
ನಂಬಿ ನಚ್ಚಿ ಮಾತಾಡಲಮ್ಮೆನವ್ವಾ.
ಚೆನ್ನಮಲ್ಲಿಕಾರ್ಜುನನಲ್ಲದ ಗಂಡರ
ಉರದಲ್ಲಿ ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ.

ಪದಗಳ ಅರ್ಥ

ಎರದ ಮುಳ್ಳು- ಉದ್ದಚೂಪಿನ ದಪ್ಪಮುಳ್ಳು. ಕಾಡುಜಾಲಿ ಮುಳ್ಳು, ಎಕ್ಕದ ಮುಳ್ಳು.
ಸುಳಿ -ಹತ್ತಿರ ಸಮೀಪ
ಉರ-ಎದೆ .

ವಚನದ ಅರ್ಥ

ಎರದ ಮುಳ್ಳಿನಂತೆ ಪರಗಂಡರೆನಗವ್ವಾ. ಸೋಂಕಲಮ್ಮೆ ಸುಳಿಯಲಮ್ಮೆನಂಬಿ ನಚ್ಚಿ ಮಾತಾಡಲಮ್ಮೆನವ್ವಾ. ಪರಪರುಷರು ಎದೆಮುಳ್ಳಿನಂತೆ . ಅವರನ್ನು ಮುಟ್ಟು ವುದಿಲ್ಲ. ಹತ್ತಿರವೂ ಸುಳಿಯುವುದಿಲ್ಲ. ಅವರಲ್ಲಿ ನಂಬಿಕೆಯನ್ನು ಇಡುವುದಿಲ್ಲ. ಅವರ ಜೊತೆ ಹತ್ತಿರವಾಗಿ ಮಾತನಾಡುವುದೂ ಇಲ್ಲ. ಚೆನ್ನಮಲ್ಲಿಕಾರ್ಜುನನಲ್ಲದ ಗಂಡರ ಉರದಲ್ಲಿ ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ. ಯಾರು ಪರಮಾತ್ಮ ಚೆನ್ನ ಮಲ್ಲಿಕಾರ್ಜುನನಲ್ಲವೊ ಅವರ ಎದೆಯಲ್ಲಿ ಮುಳ್ಳಿದೆ ಆದುದರಿಂದ ನಾನು ಅವರನ್ನು ಅಪ್ಪುವುದಿಲ್ಲ. ಇದೊಂದು ಆರೋಗ್ಯಕರ ಚಿಂತನೆ. ವಿಜ್ಞಾನ ಕೂಡ ಇಂದು ಇದನ್ನೆ ಹೇಳುತ್ತಿದೆ. ಒಂದು ಗಂಡಿಗೆ ಒಂದೆ ಹೆಣ್ಣು. ಒಂದು ಹೆಣ್ಣಿಗೆ ಒಂದೆ ಗಂಡು. ಇದು ಆರೋಗ್ಯಕ್ಕೆ ಕೂಡ ಉತ್ತಮ. ಒಂದು ಶ್ರೇಷ್ಠ ಸಮಾಜದ ನಿರ್ಮಾಣಕ್ಕೆ ಬೇಕಾದ ವಂಶವನ್ನು ಬೆಳೆಸಲು ಕೂಡ ಯೋಗ್ಯವಾದ ಸೂತ್ರ.

ಅಕ್ಕಮಹಾದೇವಿಯವರು ಲಗ್ನ ವ್ಯವಸ್ಥೆಯನ್ನು ಎತ್ತಿ ಹಿಡಿದಿದ್ದಾರೆ. ಅವರು ಲಗ್ನ ಒಲ್ಲೆ ಎಂದು ಹೇಳಿಲ್ಲ ನನಗೆ ಲಗ್ನ ಬೇಕು. ನಾನು ಪ್ರೀತಿ ಮಾಡಿದವನೊಂದಿಗೆ ಲಗ್ನ ಬೇಕು. ಇಂದಿನ ತರುಣ ಜನಾಂಗ ಇದನ್ನೆ ತಾನೆ ಬಯಸುತ್ತಿರುವುದು. ನಾನು ಪ್ರೀತಿಸಿದವರನ್ನು ಮದುವೆಯಾಗುವ ಸ್ವಾತಂತ್ರ್ಯ ಕೊಡಿ ಎಂದು ಹೇಳುತ್ತಿದ್ದಾರೆ. ಅಂದು ಅಕ್ಕ ಪ್ರೀತಿ ಮಾಡಿದರು .ಆ ಹುಡುಗ ಬೇರೆ ಯಾರೂ ಅಲ್ಲ. ಪರಮಾತ್ಮ. ನನ್ನ ಹುಡುಗ ಅಷ್ಟು ದೊಡ್ಡವನೂ. 'ವಿಶಾಲನೂ, ಉನ್ನತನೂ, ಚಿರಂತನನೂ ಇರಬೇಕು. ಇದು ಅವರ ಆಶಯ. ನನ್ನ ಲಗ್ನ ಜೀವನ,ಶಾಶ್ವತ ಇರಬೇಕೆಂಬುದು ಅವರ ಇಚ್ಚೆ ಅದಕ್ಕೆ ಅವರ ಯೋಗ್ಯ ಆಯ್ಕೆಯ ವರ ಪರಮಾತ್ಮ ಅಕ್ಕಮಹಾದೇವಿಯವರಿಗೆ ಶರಣಸತಿ ಲಿಂಗ ಪತಿ ಪರಿಕಲ್ಪನೆ ಕೇವಲ ಅನುಭಾವಕ್ಕಷ್ಟೇ ಅಲ್ಲ. ಲೌಕಿಕ ಜೀವನದಲ್ಲೂ ಬೇಕು .

12) ಎಲ್ಲಎಲ್ಲವನರಿದು ಫಲವೇನಯ್ಯ?ತನ್ನ ತಾನರಿಯಬೇಕಲ್ಲದೆ?
ತನ್ನಲ್ಲಿ ಅರಿವು ಸ್ವಯವಾಗಿರಲು ಅನ್ಯರ ಕೇಳಲುಂಟೆ? ಚೆನ್ನಮಲ್ಲಿಕಾರ್ಜುನಾ ನೀನು ಅರಿವಾಗಿ ಮುಂದುದೋರಿದಕಾರಣ ನಿಮ್ಮಿಂದ ಅರಿತೆನಯ್ಯ ಪ್ರಭುವೆ.

ವಚನದ ಅರ್ಥ

ಎಲ್ಲ ಎಲ್ಲವನರಿದು ಫಲವೇನಯ್ಯ ತನ್ನ ತಾನರಿಯಬೇಕಲ್ಲದೆ? ಎಲ್ಲರು ಎಲ್ಲ ವಿಚಾರಗಳನ್ನು ತಿಳಿಯುವರು. ಆದರೆ ತನ್ನನ್ನು ತಾನು ತಿಳಿಯದಿದ್ದರೆ ಏನೂ ಉಪಯೋಗವಿಲ್ಲ. ತನ್ನಲ್ಲಿ ಅರಿವು ಸ್ವಯವಾಗಿರಲು ಅನ್ಯರ ಕೇಳಲುಂಟೆ?ನಮ್ಮಲ್ಲಿಯೆ ಅರಿವು ತದ್ಗತವಾಗಿದೆ. ಈ ಅರಿವನ್ನು ತಾನೆ ತಿಳಿಯಬೇಕು. ಇನ್ನೊಬ್ಬರನ್ನು ಕೇಳಿ ತಿಳಿಯ ಲುಬಹುದೆ? ಚೆನ್ನಮಲ್ಲಿಕಾರ್ಜುನ ನೀನು ಅರಿವಾಗಿ ಮುಂದು ದೋರಿದ ಕಾರಣ ನಿಮ್ಮಿಂದಲರಿದೆನಯ್ಯ ಪ್ರಭುವೆ? ಚೆನ್ನಮಲ್ಲಿಕಾರ್ಜುನನೆ ನೀನು ನನ್ನಲ್ಲಿ ಅರಿವಾಗಿ ಇರುವೆ. ನೀನು ಮುಂದೆ ತೋರಿದುದರಿಂದ ನಿಮ್ಮಿಂದ ನಾನು ಅರಿತೆನಯ್ಯ ಪ್ರಭು ದೇವರೆ? ಕಾಯಕಕ್ಕೆ ಬೇಕಾದ ಒಂದು ವಿದ್ಯೆಯನ್ನು ಕಲಿತಮೇಲೆ ತನ್ನನ್ನು ತಿಳಿ ಯುವ ಪ್ರಯತ್ನವನ್ನೂ ಮಾಡಬೇಕು. ಇದು ಬೇರೆಯಾರೊ ತಿಲಿಸುವುದಲ್ಲ. ತಾವೆ
ತಿಳಿಯಬೇಕಾದ ವಿಚಾರವಾಗಿದೆ.

13) ಏಳುಕೋಟಿ ಮಹಾಮಂತ್ರ,ಉಪಮಂತ್ರಗಳಿಗೆ ಲೆಕ್ಕವಿಲ್ಲ.
ಚಿತ್ತವ್ಯಾಕುಲನಾಗಿ ಭ್ರಮಿಸದಿರಾ ಮನವೆ.
ಶಿವಶಿವ ನಮೋ ನಮೋ.ಶಿವಶಿವಾ. ಶಿವಾಶರಣೆಂದಡೆ ಸಾಲದೆ, ಅದೆಂತೆಂದಡೆ ಶಿವಧರ್ಮೇ-
ಶಿವೇತಿ ಮಂಗಲಂ ನಾಮ ಯಸ್ಯವಾಚಿ ಪ್ರವರ್ತತೆ
ಭಸ್ಮೀ ಭವಂತಿ ತಥ್ಯಾಶುಮಹಾಪಾವಕ ಕೋಟಿಯಃ ಇಂತೆಂದುದಾಗಿ ಎನಗಿದೆ ಮಂತ್ರ ಎನಗಿದೆ ತಂತ್ರ ಎನಗದೆ ಗತಿಮತಿ ಚೈತನ್ಯವಯ್ಯ ಚೆನ್ನಮಲ್ಲಿಕಾರ್ಜುನಾ.

ಪದಗಳ ಅರ್ಥ

ಅನುಭಾದ ದಾರಿಯಲ್ಲಿ ಏಳುಕೋಟಿ ಮಹಾಮಂತ್ರಗಳು ಆಚರಣೆಯಲ್ಲಿವೆ-- ವ್ಯಾಕುಲ-ಕಳವಳ, ಭ್ರಮಿಸು-ಭ್ರಮೆ,ಮಿಥ್ಯಾಭಾವಕ್ಕೊಳಗಾಗು. ಶಿವ-ಶುಭ,ಮಂಗಲ,

ನಾಮ-ಹೆಸರು,

ಯಸ್ಯ-ಎಲ್ಲಿ, ಯಾರು?,

ವಾಚಿ-ಪಠಿಸು, ಸ್ಮರಿಸು,

ಪ್ರವರ್ತತೆ-ನಿರ ತನಾಗು, ತೊಡಗು,

ಭಸ್ಮಿ-ನಾಶ,

ಭವಂತಿ-ಹುಟ್ಟಿದವುಗಳು,

ತಸ್ಯಾಶು- ಅದು ಕೂಡ,

ಮಹಾಪಾತಕ- ಮಹಾಪಾಪಗಳು .

ವಚನದ ಅರ್ಥ

ಅಕ್ಕಮಹಾದೇವಿಯವರು ಈವಚನದಲ್ಲಿ ಮಹಾಮಂತ್ರದ ಮಹತ್ವವನ್ನು ವಿವರಿಸಿದ್ದಾರೆ. ವೀರಶೈವ ಲಿಂಗಾಯತ ಧರ್ಮದಲ್ಲಿ ಅಷ್ಟಾವರಣ ತತ್ವಗಳಿವೆ. ಇದರಲ್ಲಿ ಮಂತ್ರವೂ ಬಹುಮುಖ್ಯ ತತ್ವ . ಈಅಷ್ಟಾವರಣಗಳು ನಿತ್ಯ ಆಚರಿಸಬೇಕಾದ ವಿಶೇಷಗಳಾಗಿವೆ. ಇವುಗಳನ್ನು ಯಾಕೆ ಪಾಲನೆ ಮಾಡಬೇಕು ? ಅವುಗಳ ಮಹತ್ವ ಏನು? ಅದನ್ನು ತಿಳಿಸಿಕೊಡುವ ವಚನ ಇದು. ಈಅಷ್ಟಾವರಣಗಳ ಮಹತ್ವ ವಿವರಿಸಲು ಶಿವಧರ್ಮದ ಶ್ಲೋಕವನ್ನು ಉದಾಹರಿಸಿ ವಿವರಿಸಿದ್ದಾರೆ. ಏಳು ಕೋಟಿ ಮಹಾಮಂತ್ರ. ಉಪಮಂತ್ರ ಗಳಿಗೆ ಲೆಕ್ಕವಿಲ್ಲ. ಮಂತ್ರಗಳಲ್ಲಿ ಏಳುಕೋಟಿ ಮಂತ್ರಗಳಿವೆ. ಲೆಕ್ಕವಿಲ್ಲದಷ್ಟು ಉಪ ಮಂತ್ರಗಳಿವೆ. ಅನುಭಾವ ಜೀವನಕ್ಕೆ ಪದಾರ್ಪಣ ಮಾಡಿದವರಿಗೆ ಯಾವ ಮಂತ್ರ ವನ್ನು ಜಪಿಸಬೇಕು ಎಂಬುದೂ ಒಂದು ದೊಡ್ಡ ಸಮಸ್ಯೆಯೆ. ಈಮಂತ್ರಗಳ ಜಗತ್ತನ್ನು ಅರಿತ ಅಕ್ಕನವರು ನಮಗೆ ಮಾರ್ಗದರ್ಶನ ಮಾಡಿದ್ದಾರೆ. ಚಿತ್ತವ್ಯಾಕುಲನಾಗಿ ಭ್ರಮಿಸದಿರಾ ಎಲೆ ಮನವೆ. ಎನ್ನುತ್ತಾರೆ. ಚಿತ್ತವು ದುಃಖಗಳು ಬಂದಾಗ ಬಹಳ ದುಃಖ ಕ್ಕೆಳಗಾಗುತ್ತದೆ. ಆಪತ್ತಿಗೆಂದು ಕೇಳಿದ ಮಂತ್ರವನ್ನೆಲ್ಲ ಜಪಿಸುತ್ತದೆ. ಅದಕ್ಕೆ ಅವರು ಸಲಹೆ ಕೊಡುತ್ತಾರೆ. ಶಿವಧರ್ಮಪುರಾಣದ ಆಧಾರವನ್ನೂ ಕೊಡುತ್ತಾರೆ. ಶಿವೇತಿ ಮಂಗಲಂ ನಾಮ ಯಸ್ಯ ವಾಚೀ ಪ್ರವರ್ತತೆ ಭಸ್ಮೀ ಭವಂತಿ ತಸ್ಯಾಷು ಮಹಪಾತಕ ಕೋಟಿಯ: || ಎಲ್ಲ ಮಹಾಮಂತ್ರಗಳಲ್ಲಿ ಓಂನಮಃಶಿವಾಯ ಮಹಾಮಂತ್ರವೇ ಸರ್ವಶೇಷ್ಠವಾದುದು. ಶಿವಶಿವ ಎನ್ನುವ ಸ್ಮರಣೆ ಮಾಡು ಶರಣಾಗು ಶಿವ ಎನ್ನುವ ಹೆಸರೆ ಮಂಗಲಾರ್ಥವುಳ್ಳದ್ದು. ಯಾರು ಈ ಮಹಾಮಂತ್ರವನ್ನು ಜಪಿಸುತ್ತಾರೋ ಅವರ ಕೋಟಿಕರ್ಮಗಳು ನಾಶವಾಗುತ್ತವೆ. ನೀನು ಸುಮ್ಮನೆ ಚಿಂತೆಗೊಳಗಾಗ ಬೇಡ. ಇದೆ ಮಂತ್ರ. ಇದೆ ತಂತ್ರ. ಇದೆ ನನಗೆ ದಾರಿ. ಇದೆ ಮೋಕ್ಷ. ಇದೆ ಬುದ್ಧಿ. ವಿವೇಕ. ಈ ಮಹಾಮಂತ್ರವೆ ನನಗೆ ಮೂಲಚೈತನ್ಯ. ಅಕ್ಕಮಹಾದೇವಿಯವರು ಈವಚನದಲ್ಲಿ ಮಹಾಮಂತ್ರದ ಮಹತ್ವವನ್ನು ವಿವರಿಸಿದ್ದಾರೆ.